**<u>ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ</u>**

**<u>ಸಿಸಿ ನಂ.39 /2019</u>**

**<u>ಚಾಸಾ-13/ಪಿಡಬ್ಲೂ-5</u>**

| | |
|---|---|
| **ಹೆಸರು** | ಶ್ರೀಶೈಲ |
| **ತಂದೆ ಹೆಸರು** | ಜೊತೆಪ್ಪಗೌಡ |
| **ವಯಸ್ಸು** | 42 ವರ್ಷ |
| **ಉದ್ಯೋಗ** | ಮುಖ್ಯ ಪೇದೆ |
| **ವಾಸ ಸ್ಥಳ** | ನೆಲೋಗಿ |

**<u>ದಿನಾಂಕ 22.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

2012 ರಿಂದ 2016 ನೆಲೋಗಿ ಠಾಣೆಯಲ್ಲಿ ಪೋಲಿಸ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 25.04.2015 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ ಚಾಸಾ-1 ರವರು ಠಾಣೆಗೆ ಹಾಜರಾಗಿ ಚಾಸಾ-11 ರವರಿಗೆ ಹೇಳಿದ್ದೇನೆಂದರೆ ನಾಗರಾನಿ ಬ್ರಿಜ್ ಹತ್ತಿರ ಕೆಲವು ಜನ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿದ್ದಾರೆಂದು ಹೇಳಿ, ಚಾಸಾ-11 ರವರು ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಕರೆದುಕೊಂಡು ದಾಳಿ ವಿಚಾರ ತಿಳಿಸಲಾಯಿತು. ನಂತರ ನಾನು, ಚಾಸಾ-1, 11, 12, 14 ರವರ ಸೇರಿ ಠಾಣೆಯಿಂದ ಜೀಪನಲ್ಲಿ ನಾಗರಾನಿ ಬ್ರಿಜ್ ಹತ್ತಿರ ಸ್ವಲ್ಪ ದೂರದಲ್ಲಿ ನಿಂತು ನೋಡಲಾಗಿ ಅಲ್ಲಿ ಅಕ್ರಮವಾಗಿ ಟಿಪ್ಪರಗಳಲ್ಲಿ ಮರಳು ತುಂಬಿಕೊಂಡು ಬರುತ್ತಿದ್ದಾಗ ನಮ್ಮನ್ನು ನೋಟಿ ಟಿಪ್ಪರ ಚಾಲಕರು ಮರಳನ್ನು ಅಲ್ಲೆ ಡಂಪ್ ಮಾಡಿ ಓಡಿ ಹೋಗಿರುತ್ತಾರೆ. ನಂತರ ನಾವು ಅಲ್ಲಿಗೆ ಹೋಗಿ ನೋಡಲಾಗಿ ಒಟ್ಟು 08 ಟಿಪ್ಪರಗಳಿದ್ದು ಅವುಗಳ 1) KA-28/C-409, 2) KA-28/C-1345, 3) KA-28/B-9708, 4)

KA-40/8826, 5) KA-28/B-8440, 6) KA-25/D-7173, 7) KA-25/AA-1507, 8) KA-28/B-0399 ಆಗಿದ್ದವು. ಸದರಿ ಮರಳಿನ ಕಿಮ್ಮತ್ತು ಅಂದಾಜು ರೂ.56,000/- ಗಳಷ್ಟು ಆಗಿತ್ತು.

ನಂತರ ಚಾಸಾ-1 ರವರು ರಾತ್ರಿ 10.00 ರಿಂದ 11.30 ರವರೆಗೆ ಪಂಚರ ಸಮಕ್ಷಮ ಜರುಗಿಸಿ 08 ಟಿಪ್ಪರಗಳನ್ನು ವಶಪಡಿಸಿಕೊಂಡಿರುತ್ತಾರೆ. ಆನಂತರ ಚಾಸಾ-1 ರವರು ರಾತ್ರಿ 12.00 ಗಂಟೆಗೆ 08 ಟಿಪ್ಪರಗಳು ಮತ್ತು ಜಪ್ತಿ ಪಂಚನಾಮೆಯೊಂದಿಗೆ ಠಾಣೆಗೆ ಬಂದು ಚಾಸಾ-16 ರವರಿಗೆ ವರದಿಯೊಂದಿಗೆ ವಶಕ್ಕೆ ನೀಡಿರುತ್ತಾರೆ. ದಿನಾಂಕ 26.04.2015 ರಂದು ಘಟನೆ ಕುರಿತು ಹೇಳಿಕೆ ನೀಡಿರುತ್ತೇನೆ. ದಿನಾಂಕ 28.04.2015 ರಂದು ಆರೋಪಿತರ ಗುರುತಿಸುವಿಕೆ ಬಗ್ಗೆ ಪುರವಣಿ ಹೇಳಿಕೆ ನೀಡಿರುತ್ತೇನೆ.

1) KA-28/C-409 ರ ಚಾಲಕ ಅಂಬಣ್ಣ, 2) KA-28/C-1345 ರ ಚಾಲಕ ಶಿವಾಜಿ ಚವಾಣ, 3) KA-28/B-9708 ರ ಚಾಲಕ ಪರಶುರಾಮ, 4) KA-40/8826 ರ ಚಾಲಕ ಮಲ್ಲಪ್ಪ, 5) KA-28/B-8440 ರ ಚಾಲಕ ಪಪ್ಪು ಚಾವಾಣ, 6) KA-28/B-0399 ರ ಚಾಲಕ ಯಲ್ಲಪ್ಪ ಇರುತ್ತಾರೆ.

ವಶಪಡಿಸಿಕೊಂಡ ಟಿಪ್ಪರಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳಲ್ಲಿ ಕಾಣುವ ಟಿಪ್ಪರಗಳನ್ನು ಆ ದಿನ ನಾವು ವಶಪಡಿಸಿಕೊಂಡಿರುತ್ತೇವೆ. ಸದರಿ ಫೋಟೋಗಳನ್ನು ಈಗಾಗಲೆ ನಿಪಿ-5 ರಿಂದ 8, 10 ರಿಂದ 19 ಎಂದು ಗುರುತಿಸಲಾಗಿದೆ.

**ಈ ಹಂತದಲ್ಲಿ ಸ.ಸ.ಅ. ರವರು ಮುಂದುವರೆದ ಮುಖ್ಯ ವಿಚಾರಣೆಗೆ ಒಂದು ಗಂಟೆ ಅವಧಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.**

**ದಿನಾಂಕ 22.10.2024 ರಂದು ಪುನಃ ಕರೆಯಿಸಿ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ದಿನಾಂಕ 29.04.2015 ರಂದು ಇನ್ನೆರಡು ಟಿಪ್ಪರಗಳನ್ನು ಠಾಣೆಗೆ ಹಾಜರುಪಡಿಸಿದಾಗ ನನ್ನನ್ನು ಕರೆಯಿಸಿ ಅವುಗಳ ನಂ.ಕೆಎ-25/ಡಿ-7173 ರ ಚಾಲಕ ಸಂಗಯ್ಯ ಮಹಾಂತಯ್ಯ ಹಿರಮೇಠ ಮತ್ತು ಇನ್ನೊಂದು ಟಿಪ್ಪರ ನಂ.ಕೆಎ-25/ಎಎ-1507 ರ ಚಾಲಕ ವಿರೇಶ ತಂದೆ ಬಸವಂತಪ್ಪ ಹೂಗಾರ ಎಂದು

ಗುರುತಿಸಿದ ಬಗ್ಗೆ ಆ ಕುರಿತು ಮುಂದುವರೆದ ಪುರವಣಿ ಹೇಳಿಕೆ ನೀಡಿರುತ್ತೇನೆ.

**ಪಾಟಿ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಎಂಎಂಆರ್.ಡಿ ಕಾಯ್ದೆ ಪ್ರಕಾರ ಭೂ ಮತ್ತು ಗಣಿ ವಿಜ್ಞಾನ ಇಲಾಖೆಗೆ ಸಂಬಧಿಸಿದ್ದು ಎಂದರೆ ಕಳ್ಳತನದ ಪ್ರಕರಣವಾಗಿರುವುದರಿಂದ ಪೋಲಿಸ ಇಲಾಖೆ ವ್ಯಾಪ್ತಿಗೆ ಬರುತ್ತದೆ. ನಾವು ಹೊರಟ ನಮ್ಮ ಠಾಣೆಯ ಜೀಪ ನಂಬರ ನನಗೆ ಗೊತ್ತಿಲ್ಲ. ಚಾಸಾ-1 ರವರು ದೂರು ನೀಡಿರುತ್ತಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ಪಂಚರನ್ನಾಗಿ ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿ 08 ಟಿಪ್ಪರಗಳನ್ನು ವಶಪಡಿಸಿಕೊಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿಕೆ ಹಾಗೂ ಮರು ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾಸಾ-1 ರವರು ನನ್ನ ಮೇಲಾಧಿಕಾರಿಯಾಗಿರುವುದರಿಂದ ಅವರು ನೀಡಿದ ಸುಳ್ಳು ದೂರಿಗೆ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ದಾಳಿ ಮಾಡಿದಾಗ ಟಿಪ್ಪರ ಚಾಲಕರು ನಮ್ಮನ್ನು ನೋಡಿ ಓಡಿ ಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಟಿಪ್ಪರಗಳನ್ನಉ ವಶಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರಕಾರಕ್ಕೆ ಅಂಕಿ ಅಂಶ ಒದಗಿಸುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರಿಗೂ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ